**Press Coverage's of Agri-drone Demonstration for Biopesticides Application**

ICAR-NBAIR conducted about 20 biopesticides spraying demonstrations in five clusters (5 demonstration /cluster) using oil based formulation of various biopesticides carried out in Hassan, Chamarajnagar, Tumkur and Mysuru districts of Karnataka. Demonstrations were conducted in turmeric, tomato, banana, cabbage, sugarcane, avocado, coconut, potato and maize to create awareness among farmers' and promotion of drone technology especially in crop protection. These entire demonstration programmes were widely covered in following newspapers during 5-11 September, 2025 for the wider publicity for the benefit of different stakeholders. News clipping were given below.



ಕೃಷಿ ಮಹಾವಿದ್ಯಾಲಯ,ಕಾರೇಕೆರೆ,ಹಾಸನದ "ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ"ದ ಅಡಿಯಲ್ಲಿ ಅಂತಿಮ ವರ್ಷದ ಕೃಷಿ ಮತ್ತು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳು ವಿಜ್ಞಾನಿಗಳೊಂದಿಗೆ "ಆಲೂಗಡ್ಡೆಯಲ್ಲಿ ಡ್ರೋನ್ ಸಿಂಪಡಣೆ ಪ್ರದರ್ಶನ " ವನ್ನು ಹಂಪನಹಳ್ಳಿಯಲ್ಲಿ ಆಯೋಜಿಸಿದ್ದರು.ಈ ಪ್ರದರ್ಶನದಲ್ಲಿ ಡಾ. ಶಶಿಕಲಾ., ಸಹಾಯಕ ಪ್ರಾಧ್ಯಾಪಕಿ, ಕೃಷಿ ವಿಸ್ತರಣಾ ವಿಭಾಗ; ಡಾ. ವಿನೋದಾ ಶಂಕರ ನಾಯ್ಕ, ಸಹಾಯಕ ಪ್ರಾಧ್ಯಾಪಕಿ, ಕೃಷಿ ವಿಸ್ತರಣಾ ವಿಭಾಗ; ಡಾ.ಸೆಲ್ವಿರಾಜ್, ವಿಜ್ಞಾನಿ, ಕೃಷಿ ಕೀಟಶಾಸ್ತ್ರ ವಿಭಾಗ, ICAR- NBAIR, ಬೆಂಗಳೂರು;ಡಾ. ಶ್ರೀನಿವಾಸ್ ದೇಶಪಾಂಡೆ, ಏಗಿಐ ಕಂದಹಳ್ಳಿ, ಹಾಸನ ಇವರು ಉಪಸ್ಥಿತರಿದ್ದರು. ಈ ಪ್ರದರ್ಶನದಲ್ಲಿ ಡ್ರೋನ್‌ಬಳಸುವುದರಿಂದಾಗುವ ಉಪಯೋಗಗಳನ್ನು ತಿಳಿಸಿದರು. ನಂತರ ಟ್ರೈಕೋಡರ್ಮ ಆಸ್ಪರಿಲೂಮ್ ಅನ್ನು 10ಟಟ ಒಂದು ಲೀಟರ್ ನೀರಿನಲ್ಲಿ ಹಾಕಿ ಡ್ರೋನ್ ಬಳಸಿಕೊಂಡು ಹೂವು ಬಿಡುತ್ತಿರುವ ಆಲೂಗಡ್ಡೆಗೆ ಸಿಂಪಡಿಸಿದರು. ಕೇಂದ್ರ ಸರ್ಕಾರದ ಯೋಜನೆಯಾದ'ನಮೋ ಡ್ರೋನ್ ದೀದಿ'ಯಲ್ಲಿ ಸಿಗುವ 80% ಸಬ್ಸಿಡಿ ದರ ಹಾಗೂ ಸಹಕಾರ ಸಂಘಗಳು ಕೊಡುವ ಸಬ್ಸಿಡಿ ದರಗಳನ್ನು ಕುರಿತು ಮಾಹಿತಿ ನೀಡಿದರು.

…………………………………………………………………………………………

**Paper: Janatha Madyana** **Date: 05.09.2025**

# ಆಲೂಗಡ್ಡೆ ಬೆಳೆ ಮೇಲೆ ಡ್ರೋನ್ ಸಿಂಪಡಣೆ ಪ್ರದರ್ಶನ



ಹಾಸನ: ಕೃಷಿ ಮಹಾ ವಿದ್ಯಾಲಯ, ಕಾರೇಕೆರೆಯ "ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ"ದ ಅಂಗವಾಗಿ ಅಂತಿಮ ವರ್ಷದ ಕೃಷಿ ಮತ್ತು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳು ಹಂಪನಹಳ್ಳಿಯಲ್ಲಿ ಆಲೂಗಡ್ಡೆ ಬೆಳೆ ಮೇಲೆ ಡ್ರೋನ್ ಸಿಂಪಡಣೆ ಪ್ರದರ್ಶನ ಆಯೋಜಿಸಿದರು.

ಕೃಷಿ ವಿಸ್ತರಣಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಶಶಿಕಲಾ, ಡಾ. ವಿನೋದಾ ಶಂಕರ ನಾಯ್ಕ, ಕೃಷಿ ಕೀಟಶಾಸ್ತ್ರ ವಿಭಾಗ ಬೆಂಗಳೂರು ಅವರ ವಿಜ್ಞಾನಿ ಡಾ. ಸೆಲ್ವಿರಾಜ್ ಹಾಗೂ ಕಂದಹಳ್ಳಿ ಹಾಸನದ ಡಾ. ಶ್ರೀನಿವಾಸ್ ದೇಶಪಾಂಡೆ ಉಪಸ್ಥಿತರಿದ್ದು, ಡ್ರೋನ್ ಬಳಕೆಯಿಂದ ರೈತರಿಗೆ ಲಭ್ಯವಾಗುವ ಪ್ರಯೋಜನಗಳ ಬಗ್ಗೆ ತಜ್ಞರು ಮಾಹಿತಿ ನೀಡಿದರು. ಬಳಿಕ, ಟ್ರೈಕೋಡರ್ಮ ಆಸ್ಪರಿಲೂವಮ್ ದ್ರಾವಣವನ್ನು (10 ಮಿ.ಲೀ. ಒಂದು ಲೀಟರ್ ನೀರಿಗೆ) ತಯಾರಿಸಿ ಹೂವು ಬಿಡುತ್ತಿರುವ ಆಲೂಗಡ್ಡೆ ಬೆಳೆ ಮೇಲೆ ಡ್ರೋನ್ ಮೂಲಕ ಸಿಂಪಡಿಸಲಾಯಿತು.

ಕೇಂದ್ರ ಸರ್ಕಾರದ 'ನಮೋ ಡ್ರೋನ್ ದೀದಿ' ಯೋಜನೆಯಡಿ ರೈತರಿಗೆ ಲಭ್ಯವಿರುವ 80% ಸಬ್ಸಿಡಿ ಹಾಗೂ ಸಹಕಾರ ಸಂಘಗಳು ನೀಡುವ ಸಬ್ಸಿಡಿ ಸೌಲಭ್ಯಗಳ ಕುರಿತು ವಿದ್ಯಾರ್ಥಿಗಳು ಮತ್ತು ರೈತರಿಗೆ ವಿವರಿಸಲಾಯಿತು. ಈ ಪ್ರಯೋಗಾತ್ಮಕ ಪ್ರದರ್ಶನದಲ್ಲಿ ರೈತರು ಹೆಚ್ಚಿನ ಆಸಕ್ತಿ ತೋರಿದರು.

# ಆಲೂಗಡ್ಡೆಯಲ್ಲಿ ಡ್ರೋನ್ ಸಿಂಪಡಣೆ ಪ್ರದರ್ಶನ

ಹಂಪನಹಳ್ಳಿ, ಹಾಸನ: ಕೃಷಿ ಮಹಾ ವಿದ್ಯಾಲಯ,ಕಾರೇಕೆರೆ,ಹಾಸನದ "ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ"ದ ಅಡಿಯಲ್ಲಿ ಅಂತಿಮ ವರ್ಷದ ಕೃಷಿ ಮತ್ತು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳು ವಿಜ್ಞಾನಿಗಳೊಂದಿಗೆ "ಆಲೂಗಡ್ಡೆಯಲ್ಲಿ ಡ್ರೋನ್ ಸಿಂಪಡಣೆ ಪ್ರದರ್ಶನ"ವನ್ನು ಹಂಪನಹಳ್ಳಿಯಲ್ಲಿ ಆಯೋಜಿಸಿದ್ದರು.

ಈ ಪ್ರದರ್ಶನದಲ್ಲಿ ಡಾ. ಶಶಿಕಲಾ., ಸಹಾಯಕ ಪ್ರಾಧ್ಯಾಪಕಿ, ಕೃಷಿ ವಿಸ್ತರಣಾ ವಿಭಾಗ; ಡಾ. ವಿನೋದಾ ಶಂಕರ ನಾಯ್ಕ, ಸಹಾಯಕ ಪ್ರಾಧ್ಯಾಪಕಿ, ಕೃಷಿ ವಿಸ್ತರಣಾ ವಿಭಾಗ; ಡಾ.ಸೆಲ್ವಿರಾಜ್, ವಿಜ್ಞಾನಿ, ಕೃಷಿ ಕೀಟಶಾಸ್ತ್ರ ವಿಭಾಗ, ICAR- NBAIR , ಬೆಂಗಳೂರು;ಡಾ. ಶ್ರೀನಿವಾಸ್ ದೇಶಪಾಂಡೆ, KVK ಕಂದಹಳ್ಳಿ, ಹಾಸನ ಇವರು ಉಪಸ್ಥಿತರಿದ್ದರು. ಈ ಪ್ರದರ್ಶನದಲ್ಲಿ ಡ್ರೋನ್ ಬಳಸುವುದರಿಂದಾಗುವ ಉಪಯೋಗಗಳನ್ನು ತಿಳಿಸಿದರು. ನಂತರ



ಟ್ರೈಕೋಡರ್ಮ ಆಸ್ಪರಿಲೂವಮ್ ಅನ್ನು 10ml ಒಂದು ಲೀಟರ್ ನೀರಿನಲ್ಲಿ ಹಾಕಿ ಡ್ರೋನ್ ಬಳಸಿಕೊಂಡು ಹೂವು ಬಿಡುತ್ತಿರುವ ಆಲೂಗಡ್ಡೆಗೆ ಸಿಂಪಡಿಸಿದರು. ಕೇಂದ್ರ ಸರ್ಕಾರದ ಯೋಜನೆಯಾದ "ನಮೋ ಡ್ರೋನ್ ದೀದಿ"ಯಲ್ಲಿ ಸಿಗುವ 80% ಸಬ್ಸಿಡಿ ದರ ಹಾಗೂ ಸಹಕಾರ ಸಂಘಗಳು ಕೊಡುವ ಸಬ್ಸಿಡಿ ದರಗಳನ್ನು ಕುರಿತು ಮಾಹಿತಿ ನೀಡಿದರು.

# ಮೆಕ್ಕೆ ಜೋಳಕ್ಕೆ ಡ್ರೋನ್ ಸಿಂಪಡಣೆ ಮಾಹಿತಿ



ಹಾಸನ, ಸೆ.5– ಸಣ್ಣಚಾಕನಹಳ್ಳಿ ಹಾಗೂ ದೊಡ್ಡಚಾಕನಹಳ್ಳಿಯಲ್ಲಿ ಕೃಷಿ ಮಹಾವಿದ್ಯಾಲಯ ಕಾರೆಕೆರೆ ಹಾಸನದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಡಿಯಲ್ಲಿ ಡ್ರೋನ್ ಸಿಂಪಡಣೆಯ ಮಹತ್ವ ಕುರಿತ ಕಾರ್ಯಕ್ರಮವನ್ನು ಆಯೋಜಿಸಲಾ ಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಶಶಿಕಲಾ, (ಕೃಷಿ ವಿಸ್ತರಣೆ ವಿಭಾಗದ ಸಹಾಯಕ ಪ್ರಾಧ್ಯಾಪಕರು), ಡಾ. ವಿನೋದ (ಕೃಷಿ ವಿಸ್ತರಣೆ ವಿಭಾಗದ ಸಹಾಯಕ ಪ್ರಾಧ್ಯಾಪಕರು), ಡಾ.ಕೆ. ಸೆಲ್ವರಾಜ್, ಶ್ರೀನಿವಾಸ್ ದೇಶಪಾಂಡೆ ಆಗಮಿಸಿದ್ದರು.

ಡ್ರೋನ್ ತಂತ್ರಜ್ಞಾನವನ್ನು ಕೃಷಿಯಲ್ಲಿ ಬಳಸುವುದರಿಂದ ಕಡಿಮೆ ಸಮಯ, ಕಡಿಮೆ ವೆಚ್ಚ ಮತ್ತು ಹೆಚ್ಚು ಪರಿಣಾಮಕಾರಿ ರೀತಿ ಕೀಟನಾಶಕ/ರೋಗನಾಶಕ/ಪೋಷಕ ದ್ರವಗಳನ್ನು ಸಿಂಪಡಿಸಬಹುದು ಎಂದು ತಿಳಿಸಿದರು.

ಕಡಿಮೆ ಸಮಯದಲ್ಲಿ ಹೆಚ್ಚಿನ ಪ್ರದೇಶ ಸಿಂಪಡಣೆ ಸಾಧ್ಯ. ಒಂದೇ ಮಟ್ಟದಲ್ಲಿ ಸಿಂಪಡಣೆ ಆಗುತ್ತದೆ. ರೈತರಿಗೆ ಕೀಟನಾಶಕ ಅಥವಾ ರಾಸಾಯನಿಕಗಳ ನೇರ ಸಂಪರ್ಕ ತಪ್ಪುತ್ತದೆ. 25–30% ದ್ರಾವಣ ಉಳಿತಾಯ. ಕಾರ್ಮಿಕರ ಕೊರತೆ ಸಮಸ್ಯೆ ನಿವಾರಣೆ. ಬೆಳೆಯ ಆರೋಗ್ಯ ಉತ್ತಮವಾಗಿ ಕಾಪಾಡಬಹುದು ಎಂದರು.

ಮೆಕ್ಕೆಜೋಳ ಬೆಳೆಗೆ ಡ್ರೋನ್ ಮೂಲಕ ಕೀಟನಾಶಕ (ಸೈನಿಕ ಹುಳು, ಕಾಂಡಕೊರಕ ನಿಯಂತ್ರಣಕ್ಕೆ), ಶಿಲೀಂಧ್ರನಾಶಕ ನಿಯಂತ್ರಣಕ್ಕೆ ಮೈಕ್ರೋ ನ್ಯುಟ್ರಿಯಂಟ್ಸ್ (ಎಲೆಗಳ ಸಿಂಪರಣೆ ಮೂಲಕ ಪೋಷಕಾಂಶ ಪೂರೈಕೆ), ದ್ರವ ಗೊಬ್ಬರ (ಹುಟ್ಟುವ ಹಂತದಲ್ಲಿ ಬೆಳವಣಿಗೆಗೆ ಉತ್ತೇಜನ) ಸಿಂಪಡಣೆ ಮಾಡಬಹುದು ಎಂದು ವಿವರ ನೀಡಿದರು.

20–25 ದಿನಗಳ ಬೆಳೆಯ ಹಂತ: ಪ್ರಾಥಮಿಕ ರೋಗ/ಕೀಟ ನಿಯಂತ್ರಣಕ್ಕೆ. 40–45 ದಿನಗಳ ಬೆಳೆಯ ಹಂತ: ಎಲೆಗಳ ಮೇಲೆ ಉಂಟಾಗುವ ಕೀಟ/ರೋಗಗಳಿಗೆ. 65–70 ದಿನಗಳ ಬೆಳೆಯ ಹಂತ: ಹುಟ್ಟುವ ಹಂತದಲ್ಲಿ ಪೋಷಕಾಂಶ ಪೂರೈಕೆಗೆ ಬಳಸಬಹುದು ಎಂದು ಮಾಹಿತಿ ನೀಡಿದರು.

# ಆಲೂಗಡ್ಡೆ ಬೆಳೆ ರಕ್ಷಣೆಗೆ ಡ್ರೋನ್ ಸಿಂಪಡಣೆ ಪ್ರದರ್ಶನ



ಹಾಸನ: ಕೃಷಿ ಮಹಾವಿದ್ಯಾಲಯ, ಕಾರೇಕೆರೆಯ ವಿದ್ಯಾರ್ಥಿಗಳು ಹಂಪನಹಳ್ಳಿ ಗ್ರಾಮದಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಭಾಗವಾಗಿ ಆಲೂಗಡ್ಡೆ ಬೆಳೆಗಳ ಮೇಲೆ ಡ್ರೋನ್ ಸಿಂಪಡಣೆ ಪ್ರದರ್ಶನವನ್ನು ಯಶಸ್ವಿಯಾಗಿ ಆಯೋಜಿಸಿದರು.

ಕೃಷಿ ಮತ್ತು ಜೈವಿಕ ತಂತ್ರಜ್ಞಾನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳು ರೈತರಿಗೆ ಆಧುನಿಕ ತಂತ್ರಜ್ಞಾನದ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಿದರು. ತಜ್ಞರು ಡ್ರೋನ್ ಬಳಕೆಯ ಪ್ರಯೋಜನಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ನಂತರ, ಹೂವು ಬಿಡುತ್ತಿರುವ ಆಲೂಗಡ್ಡೆ ಬೆಳೆಗಳಿಗೆ ಟ್ರೈಕೋಡರ್ಮ ಆಸ್ಪರಿಲೂಮ್ ದ್ರಾವಣವನ್ನು (10 ಮಿ.ಲೀ. ಒಂದು ಲೀಟರ್ ನೀರಿಗೆ) ಡ್ರೋನ್ ಮೂಲಕ ಸಿಂಪಡಿಸಲಾಯಿತು. ಈ ಪ್ರಾಯೋಗಿಕ ಪ್ರದರ್ಶನಕ್ಕೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಅಲ್ಲದೆ, ಕೇಂದ್ರ ಸರ್ಕಾರದ 'ನಮೋ ಡ್ರೋನ್ ದೀದಿ' ಯೋಜನೆಯಡಿ ರೈತರಿಗೆ ಲಭ್ಯವಿರುವ ಶೇ.80 ರಷ್ಟು ಸಹಾಯಧನ ಮತ್ತು ಸಹಕಾರ ಸಂಘಗಳ ಸಬ್ಸಿಡಿ ಸೌಲಭ್ಯಗಳ ಕುರಿತು ವಿದ್ಯಾರ್ಥಿಗಳು ಮತ್ತು ರೈತರಿಗೆ ವಿವರಣೆ ನೀಡಲಾಯಿತು. ಈ ಸಂದರ್ಭ ಕೃಷಿ ವಿಸ್ತರಣಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಶಶಿಕಲಾ, ಡಾ.ವಿನೋದಾ ಶಂಕರ ನಾಯ್ಕ, ಬೆಂಗಳೂರಿನ ಕೃಷಿ ಕೀಟಶಾಸ್ತ್ರ ವಿಭಾಗದ ವಿಜ್ಞಾನಿ ಡಾ. ಸೆಲ್ವಿರಾಜ್ ಹಾಗೂ ಡಾ. ಶ್ರೀನಿವಾಸ್ ದೇಶಪಾಂಡೆ ಭಾಗವಹಿಸಿದ್ದರು.

***Paper: Surya Vani*** ***Date: 7th September, 2025***

# ಕೆ. ಬ್ಯಾಡರಹಳ್ಳಿಯಲ್ಲಿ ಡ್ರೋನ್ ಸಿಂಪಡಣೆ ಪ್ರಾತ್ಯಕ್ಷಿಕೆ



ಹಾಸನ: ಡ್ರೋನ್ ತಂತ್ರಜ್ಞಾನವು ಕಡಿಮೆ ಸಮಯ ಮತ್ತು ವೆಚ್ಚದಲ್ಲಿ ಬೆಳೆಗಳಿಗೆ ಪರಿಣಾಮಕಾರಿಯಾಗಿ ಸಿಂಪಡಿಸಲು ಸಹಕಾರಿಯಾಗಿದೆ. ಆದ್ದರಿಂದ ರೈತರಿಗೆ ಡ್ರೋನ್ ತಂತ್ರಜ್ಞಾನ ಪರಿಚಯಿಸಲು ಹಾಸನ ಕೃಷಿ ಮಹಾವಿದ್ಯಾಲಯ ಅಂತಿಮ ವರ್ಷದ ಕೃಷಿ ಮತ್ತು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳು ತಮ್ಮ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ ಕೆ.ಬ್ಯಾಡರಹಳ್ಳಿ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಡ್ರೋನ್ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಆಯೋಜಿಸಿದ್ದರು.

ಕಾರ್ಯಕ್ರಮದಲ್ಲಿ ಎನ್.ಬಿ.ಎ.ಐ.ಆರ್. ಕೀಟಶಾಸ್ತ್ರ ವಿಜ್ಞಾನಿ ಡಾ.ಕೆ. ಸೆಲ್ವರಾಜ್, ಡಾ.ಶ್ರೀನಿವಾಸ ದೇಶಪಾಂಡೆ, ಕೃಷಿ ಮಹಾವಿದ್ಯಾಲಯದ ವಿಸ್ತರಣಾ ವಿಭಾಗ ಪ್ರಾಧ್ಯಾಪಕರು ಮತ್ತು ಶಿಬಿರದ ಸಂಯೋಜಕರಾದ ಡಾ.ಶಶಿಕಲಾ ಹಾಗೂ ಸಹ ಸಂಯೋಜಕ ಡಾ.ವಿನೋದ ಶಂಕರ ನಾಯ್ಕ ಮತ್ತು ಸಸ್ಯರೋಗ ವಿಭಾಗದ ಪ್ರಾಧ್ಯಾಪಕ ಡಾ.ಮಂಜುನಾಥ. ಎಚ್. ಹಾಜರಿದ್ದರು. ರೈತರು ಡ್ರೋನ್ ಚಾಲನೆ ತರಬೇತಿ ಪಡೆದ ನಂತರ ತಂತ್ರಜ್ಞಾನ ಬಳಸಿಕೊಳ್ಳಬಹುದು ಎಂದು ತಜ್ಞರು ತಿಳಿಸಿದರು.

ಅತಿ ಕಡಿಮೆ ಸಮಯದಲ್ಲಿ ಬೆಳೆಗಳ ಸಿಂಪಡನೆಗೆ ಸಹಕಾರಿಯಾಗಿದ್ದು, ಕಾರ್ಮಿಕರ ಮೇಲಿನ ಅವಲಂಬನೆ ಮತ್ತು ವೆಚ್ಚ ಕಡಿಮೆಗೊಳಿಸುತ್ತದೆ.

Printed, Published and Owned by K.G.Suresh and Printed at PAPPAS PRINT HOUSE, BE

**Source:** The Director, ICAR-National Bureau of Agricultural Resources, Bengaluru